

ರೂಂ' ಎಂದು ಕರೆಯುವಂತಹ ಒಂದು ದೊಡ್ಡ ಹಜಾರ ಅಲ್ಲಿ ಕಾಣಿಸಿತು. ಎಲ್ಲೆಡೆ ಕೂರಲು ಚಾಪೆ, ದಿಂಬುಗಳಿದ್ದವು. ಬಹುತೇಕರು ವಿದೇಶೀಯರೇ ಇದ್ದುದರಿಂದ ಅವರ ಮಕ್ಕಳೆಲ್ಲ ಬಟ್ಟೆಯಲ್ಲಿ ಕಟ್ಟಿದ್ದ ತೂಗುಯ್ಯಾಲೆಯಲ್ಲಿ ಆಡುತ್ತಿದ್ದರು. ಇಲ್ಲಿಗೆ ಬರುವ ವಿದೇಶಿ ಅತಿಥಿಗಳಿಗೆ ಒಂದರಿಂದ ಮೂರು ತಿಂಗಳವರೆಗೆ ಉಳಿದುಕೊಳ್ಳುವ ಅವಕಾಶವಿದೆ. ಭಾರತೀಯ ಅತಿಥಿಗಳಿಗೆ 23 ದಿನಗಳವರೆ ಮಾತ್ರ ವಾಸ್ತವ್ಯ ಹೂಡಲು ಅವಕಾಶ. ಇಲ್ಲಿ ಇರುವಷ್ಟು ದಿನ ಮಕ್ಕಳಿಗೆ ನಿಸರ್ಗವೇ ಪಾಠಶಾಲೆ. ಪುಸ್ತಕದ ಬದನೆಕಾಯಿಯ ಉರು ಹೊಡೆವ ಪಾಠದಿಂದ ಮಕ್ಕಳಿಗಿಲ್ಲಿ ಮುಕ್ತಿ. ಈ ಮಕ್ಕಳು ಅತೀ ಸಾಮಾನ್ಯ ಶೈಲಿಯ ಜೀವನಕ್ಕೆ ತಮ್ಮನ್ನು ಒಗ್ಗಿಸಿಕೊಂಡು, ಎಲ್ಲರೊಡನೆ ಕೂಡಿಕೊಂಡು ಆಟವಾಡುತ್ತಲೇ ಕಲಿಯುವಂಥ ಮುಕ್ತ ವಾತಾವರಣವನ್ನು 'ಸಾಧನಾ ಫಾರೆಸ್ಟ್'ನಲ್ಲಿ ಕಲ್ಪಿಸಲಾಗಿದೆ. ಇಲ್ಲಿ ತಂಗುವ ಅತಿಥಿಗಳು ತಾವು ಕಲಿತ ವಿದ್ಯೆ, ಹವ್ಯಾಸ–ಹಾಡು, ನೃತ್ಯ, ವಾದ್ಯಗಳನ್ನು ತಮ್ಮ ಸಹಚರರೊಂದಿಗೆ ಹಂಚಿಕೊಳ್ಳುತ್ತಾರೆ. ಉಚಿತ 'ವೈ–ಫೈ' ಸೌಲಭ್ಯವೂ ಅಲ್ಲಿದೆ.

ಒಂದೇ ಕುಟುಂಬದ ಐದಾರು ಮಂದಿ ಒಗ್ಗಿಕೊಂಡು ಒಂದೇ ಸೂರಿನಡಿ ವಾಸಿಸಲು ಹಿಂಜರಿಯುತ್ತಿರುವ ಸಂದರ್ಭ ಇಂದಿನದು. ಇಂಥ ಕಾಲಘಟ್ಟದಲ್ಲಿ ಪ್ರಪಂಚದ ನಾನಾ ಜಾಗಗಳ, ನಾನಾ ಸಂಸ್ಕೃತಿ–ಭಾಷೆಗಳ, ಆಹಾರ ಮಾದರಿಗಳ ಜನ ಅನುಸರಿಸಿಕೊಂಡು, ತಮ್ಮದೇ ಪ್ರಪಂಚ ಸೃಷ್ಟಿಸಿಕೊಂಡು ಸಹಬಾಳ್ವೆಯಿಂದ ಇರುವ ಜಾಗವೇ 'ಸಾಧನಾ ಫಾರೆಸ್ಟ್' ನಲ್ಲಿದೆ.



ಅಲ್ಲಿರುವವರ ಉಡುಗೆ ತೊಡುಗೆಗಳೂ ಸರಳ. ಅಲ್ಲಿ ಒಂದು ಗ್ರಂಥಾಲಯವಿದ್ದು, ಬಂದವರು ತಮ್ಮಲ್ಲಿರುವ ಪುಸ್ತಕವನ್ನೂ ಇಲ್ಲಿ ಸೇರಿಸಬಹುದು. ಹಾಗೆಯೇ ತಾವು ಹೊರಡುವ ಸಮಯದಲ್ಲಿ ತಾವು ತೊಟ್ಟ ಬಟ್ಟೆಯನ್ನು ಇಲ್ಲಿಯೇ ಬಿಟ್ಟು, ಅದನ್ನು ಮುಂದೆ ಬರುವವರು ಉಪಯೋಗಿಸಲು ಅನುವು ಮಾಡಿಕೊಡುವ ಪರಿಪಾಠವಿದೆ. ಈ ಜಾಗಕ್ಕೆ ಹತ್ತಿರದಲ್ಲೇ ಒಂದು ಕೊಳ ಇದ್ದು, ಅಲ್ಲಿ ಜನರು ಮಿಂದೇಳಬಹುದು. ಇಲ್ಲಿ ಯಾವ ಆಹಾರವನ್ನೂ ಬಿಸಾಡುವಂತಿಲ್ಲ. ಬಿಟ್ಟ ಆಹಾರವನ್ನು ವಿಂಗಡಿಸಿ ಸಾಕುಪ್ರಾಣಿಗಳಿಗೆ ನೀಡುತ್ತಾರೆ. ಉಳಿದಿದ್ದನ್ನು ಗೊಬ್ಬರವನ್ನಾಗಿಸಲು ಉಪಯೋಗಿಸುತ್ತಾರೆ.

ಇಲ್ಲಿ ಒಮ್ಮೆಗೇ ಎಷ್ಟು ಮಂದಿ ಅತಿಥಿಗಳು ಬಂದರೂ, ಯಾರಿಗೂ 'ಅವಕಾಶವಿಲ್ಲ' ಎನ್ನುವ ಪರಿಪಾಠವಿಲ್ಲ. ಎಲ್ಲರನ್ನೂ ಇರಿಸಿಕೊಳ್ಳುವ ವಿಶಾಲ ಮನಸ್ಸು ಹಾಗೂ ವಾಸ್ತವ್ಯ ಇಲ್ಲಿದೆ. ಆದರೆ, ಇಲ್ಲಿ ಇರಬಯಸುವ ಅತಿಥಿಗಳು ಮಾತ್ರ ಇಲ್ಲಿನ ಮೂಲಭೂತ ಸವಲತ್ತುಗಳ ವಾಸ್ತವ್ಯಕ್ಕೆ ಸಿದ್ಧರಿರಬೇಕಷ್ಟೆ. ಪ್ರತಿ ಶುಕ್ರವಾರ ಅಲ್ಲಿ ಹೊಸದಾಗಿ ಸೇರುವ ಅತಿಥಿಗಳಿಗೆ, ಆ ಜಾಗದ ರೀತಿನೀತಿ, ಉದ್ದೇಶಗಳನ್ನು ಒಳಗೊಂಡ ವಿಡಿಯೊ ತೋರಿಸುತ್ತಾರೆ.

ರಾತ್ರಿ ಹೊತ್ತು 'ಸಾಧನಾ ಫಾರೆಸ್ಟ್' ಸುತ್ತಮುತ್ತ ಕಾಡುಪ್ರಾಣಿಗಳು ಬರುವ ಸಂಭವವೂ ಉಂಟು. ಎಂತಹ ಮಳೆಗಾಲದಲ್ಲೂ ನೀರು ಸೋರಿಕೆಯಾಗದಂತೆ ಈ ಗುಡಾರಗಳನ್ನು ನಿರ್ಮಿಸಲಾಗಿದೆ.

'ಸಾಧನಾ ಫಾರೆಸ್ಟ್'ನ ಯಾರಲ್ಲೂ ಮೇಲುಕೀಳೆಂಬ ಭಾವನೆಯಿಲ್ಲ. ಇಲ್ಲಿ ಎಲ್ಲರೂ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕು. ತಮ್ಮ ಸಹಚರರಿಗೂ ಸಹಾಯಹಸ್ತವನ್ನು ನೀಡಬೇಕು. ಇಲ್ಲಿ ಆಳುಕಾಳಿನ ವ್ಯವಸ್ಥೆ ಇರುವುದಿಲ್ಲ. ಪ್ರತಿಯೊಬ್ಬನೂ ತಾನೇ ಆಳು, ಅವನೇ ಅರಸ. ಇಲ್ಲಿಗೆ ಬರುವ ಸಂದರ್ಶಕರು ದೇಣಿಗೆಯನ್ನು ನೀಡಬಹುದು.

ಪರಿಸರದಲ್ಲಿ ತಾನೂ ಒಬ್ಬ ಎನ್ನುವ ಭಾವನೆಯುಳ್ಳ ಯಾವುದೇ ವ್ಯಕ್ತಿ ಒಮ್ಮೆ ಇಲ್ಲಿ ಉಳಿದುಕೊಳ್ಳಲೇಬೇಕು. ಅದ್ಭುತವಾದ ಜೀವನಾನುಭವ ಇಲ್ಲಿ ಲಭ್ಯ. ಅನೇಕತೆಯಲ್ಲಿ ಏಕತೆಯನ್ನು ಇಲ್ಲಿ ಕಾಣಬಹುದು. ಉತ್ತರ ಅಮೆರಿಕದ ಹೈಯಾಟಿ ಹಾಗೂ ಆಫ್ರಿಕಾದ ಕೀನ್ಯಾಗಳಲ್ಲೂ ಇಂಥ 'ಫಾರೆಸ್ಟ್'ಗಳು ಇವೆಯಂತೆ.

**ಹೆಚ್ಚಿನ ವಿವರಗಳು sadhanaforest.orgನಲ್ಲಿ ಲಭ್ಯ.**

**ಸಂಪರ್ಕ: 04132677682/83, 2902655**

**ಇಮೇಲ್: sadhanaforest@auroville.org.in**